ಅಜಯ್‌ನನ್ನೇ ಅಂತೆ. ಅಜಯ್ ಸ್ವಲ್ಪ ಸೊರಗಿದವರಂತೆ ಕಂಡರು ಅಂತ ಮೇಸ್ತ್ರಿ ಹೇಳಿದ್ರು. ಅವರು ಬಸ್ಸಿಲ್ಲಿದ್ದರಂತೆ. ಇಳಿದು ಮಾತಾಡಿಸಲು ಆಗ್ಲಿಲ್ಲವಂತೆ.

ಅವನು ಇನ್ನೂ ಕರ್ನೂಲ್‌ನಲ್ಲೇ ಅಲ್ಲೇ ಇರಬೌದು ಅಂತ ನಾನೂ ಅಲ್ಲಿಗೆ ಹೋಗಿದ್ದೆ. ಆಮೇಲೆ ಕಡಪಾ, ಅನಂತಪುರಕ್ಕೂ ಹೋಗಿ ಬಂದೆ. ಸಾರಾ ಮನೆಯಲ್ಲೇ ಉಳಕಂಡಿದ್ದೆ. ಅವಳು ಅನಂತಪುರದ ಪ್ರೆಸ್ ಕ್ಲಬ್‌ಗೆ ಕರೆದುಕೊಂಡು ಹೋಗಿ ಕೆಲ ಜರ್ನಲಿಸ್ಟ್‌ಗಳನ್ನು ಪರಿಚಯ ಮಾಡಿಕೊಟ್ಟಳು. ಅವರಿಗೆ ಮಗನ ಫೋಟೊ ಕೊಟ್‌ಬಂದಿದೀನಿ. ಇದುವರೆಗೆ ಏನೂ ಸುದ್ದಿ ಇಲ್ಲ. ನಂಗೆ ಭಯವಾಗ್ತಿದೆ ಸರ್...

ರಾಯಲಸೀಮೆಯಲ್ಲಿ ಈಗ ದೊಡ್ಡ ಭೂ ಮಾಲೀಕರು ಅಲ್ಲಿನ ಕೂಲಿಗಾರರ ಪರವಾಗಿ ಹೋರಾಟ ಮಾಡೋರನ್ನು ಸಪ್ರೆಸ್ ಮಾಡಲು ಫ್ರಾಕ್ಷನಿಸ್ಟ್‌ಗಳನ್ನು ಬಳಸಿಕೊಳ್ತ ಇದಾರೇಂತ ಸಾರಾ ಹೇಳಿದಳು.

ಸರ್, ಏನಾದರೂ ಮಾಡಿ. ನನ್ನ ಮಗನ್ನ ಹುಡುಕಿಸಿಕೊಡಿ' ಎಂದು ಹೇಳುವಾಗ ಭಾವುಕಳಾದಳು... ಅಳು ತಡೆದುಕೊಳ್ಳಲು ಅವಳಿಗೆ ಆಗಲಿಲ್ಲ.

ಪ್ರೊಫೆಸರ್ ಕುರ್ಚಿಯಿಂದ ಎದ್ದು ನಿಂತು, ಮಾಧವಿ ರಿಲ್ಯಾಕ್ಸ್, ಕೂಲ್, ಕೂಲ್ ಅನ್ನುತ್ತ ಸಾಂತ್ವನ ಹೇಳಲು ಪ್ರಯತ್ನಿಸಿದರು. ನಿನ್ನ ಮಗನಿಗೆ ಏನೂ ಆಗಿರಲ್ಲ... ನಂಗೆ ಪರಿಚಯ ಇರೋರಿಗೆಲ್ಲ ಹೇಳ್ತೀನಿ. ಹುಡುಕಿಸೋಣ ಈಗ ಅಳು ನಿಲ್ಲಿಸಿ ಎಂದು ಸಮಾಧಾನ ಹೇಳಿದರು.

ಹತ್ತು ನಿಮಿಷ ಚೇಂಬರ್‌ನಲ್ಲಿ ಮೌನ ನೆಲೆಸಿತ್ತು. ಮಾಧವಿ ಥಟ್ಟನೆ ಏನೋ ನೆನಪಾದಂತೆ ಎದ್ದು ನಿಂತು ವಾಚು ನೋಡಿಕೊಳ್ಳುತ್ತ, 'ಸರ್, ಹೊತ್ತಾಯಿತು, ಈಗ ನಾನು ಹೋಗಬೇಕು. ಹೋಮ್ ಮಿನಿಸ್ಟರ್ ಅಪಾಯಿಂಟ್‌ಮೆಂಟ್ ಸಿಕ್ಕಿದೆ. ಮಗನನ್ನು ಹುಡುಕಿಸಿ ಕೊಡಿ ಅಂತ ಅವರಿಗೆ ಮೆಮೊರಾಂಡಮ್ ಲೆಟರ್ ಕೊಟ್ಟು ಬರಬೇಕು. ಆ ಮೇಲೆ ಹೈಕೋರ್ಟಿನ ಲಾಯರೊಬ್ಬರನ್ನು ನೋಡಬೇಕಿದೆ. ಹೇಬಿಯಸ್ ಕಾರ್ಪಸ್ ಅರ್ಜಿ ಹಾಕಬೇಕು ಅಂದ್ಕೊಂಡಿದೀನಿ. ಅವರ ಅಡ್ವೈಸ್ ಕೇಳಬೇಕು' ಎನ್ನುತ್ತ ಹೊರಡುವ ಆತುರ ತೋರಿದಳು.

'ಸರ್, ನಿಮ್ಮ ಜತೆ ಇನ್ನೂ ಮಾತಾಡೋದಿದೆ. ಇನ್ನೊಂದ್ ಸಲ ಬರ್ತೀನಿ ಅನ್ನುತ್ತ ನಿಮ್ಮ ಸೆಲ್ ನಂಬರ್ ಕೊಡಿ... ಸಾಧ್ಯವಾದರೆ ಫೋನ್ ಮಾಡ್ತೀನಿ... ನಿಮ್ಮೆದುರು ಕೂತು ಮಾತಾಡುವಾಗ ನಂಗೆ ಅಳು ಬಂದ್‌ಬಿಡುತ್ತೆ. ಫೋನಿನಲ್ಲಿ ಎಲ್ಲವನ್ನೂ ಹೇಳಬಹುದು' ಎನ್ನುತ್ತ ಅವರ ಮುಖ ನೋಡಿದಳು.

ಪ್ರೊಫೆಸರ್ ಕೋಟಿನ ಜೇಬಿಗೆ ಕೈಹಾಕಿ ಪರ್ಸ್ ತೆಗೆದರು. ಅದರಿಂದ ಒಂದು ವಿಸಿಟಿಂಗ್ ಕಾರ್ಡ್ ತೆಗೆದು ಕೈಗಿಡುತ್ತ... 'ಫೋನ್ ಮಾಡೋದಾದರೆ ಸಂಜೆ ಐದರ ಮೇಲೆ ಮಾಡು. ಆ ಹೊತ್ತಲ್ಲಿ ನಾನು ಫ್ರೀಯಾಗಿರ್ತೀನಿ. ಊರಿಗೆ ಹೋದ ಕೂಡಲೇ ನಿನ್ನ ಮಗನ ಫೋಟೊ ಕಳಿಸು. ಅದನ್ನು ನಾನೇ ಕಾಪಿ ಮಾಡಿಸಿ ನಂಗೆ ಗೊತ್ತಿರೋರಿಗೆಲ್ಲ ಕಳಿಸ್ತೀನಿ. ಈಗ ಪರಿಸ್ಥಿತಿ ಮೊದಲಿನ ಹಾಗಿಲ್ಲ. ಪ್ರೊಗ್ರೆಸಿವ್ ಆಗಿ ಯೋಚನೆ ಮಾಡೋರನ್ನು ದೇಶದ್ರೋಹಿಗಳು ಅಂತ ಸರ್ಕಾರಗಳು ಬ್ರಾಂಡ್ ಮಾಡ್ತವೆ... ನನ್ನ ಓಡಾಟಗಳನ್ನೂ ಯಾರೋ ಗಮನಿಸ್ತಾ ಇದ್ದಾರೆ ಅನ್ನಿಸೋಕೆ ಶುರುವಾಗಿದೆ. ದಾಂತೇವಾಡಕ್ಕೆ ಹೋದಾಗ ಹಾಗನ್ನಿಸಿತು. ನಾನೂ ಈಗ ಓಡಾಟ ಕಡಿಮೆ ಮಾಡಿದ್ದೀನಿ, ವಯಸ್ಸಾಯ್ತಲ್ಲ... ರಾಯಲಸೀಮೆಯಲ್ಲಿ ನಂಗೆ ತುಂಬಾ ಜನ ಪರಿಚಯದೋರು ಇದ್ದಾರೆ. ನನ್ನ ತಾಯಿ ಆದೋನಿ ಪಕ್ಕದ ಹಳ್ಳಿಯವರು. ರಾಯಲಸೀಮೆಯಲ್ಲಿ ನಂಗೆ ರಿಲೆಟೀವ್ಸ್‌ಗಳಿದ್ದಾರೆ...

ಆ್ಞ, ಮಾಧವಿ ನಿಂಗೊಂದು ಮಾತು ಹೇಳಬೇಕು... ಹೇಬಿಯಸ್ ಕಾರ್ಪಸ್ ಅರ್ಜಿ ಹಾಕೋಕೆ ಮೊದಲು ಒಂದ್ ಸಲ ಯೋಚನೆ ಮಾಡು' ಎಂದಷ್ಟೇ ಹೇಳಿ ಕೆಲವು ಕ್ಷಣ ಬಿಟ್ಟು, 'ಸೀ ಯೂ ಹೋಗಿ ಬಾ... ಒಳ್ಳೆಯದಾಗುತ್ತೆ' ಎಂದರು.

★★★